## 4 ವಾರಗಳ ಗಳಿಕೆ ಕಳೆದು 3 ವಾರಗಳ ಕನಿಷ್ಠ ಮಟ್ಟಕ್ಕೆ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ

ಪರ್ಯಾಯ ಪ್ರತಿಸ್ಪರ್ಧಿ ಖಾದ್ಯ ತೈಲಗಳ ದಲಿಯನ್ ಮಾರುಕಟ್ಟೆ ದರ ಇಳಿಕೆಯಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 3 ವಾರಗಳ ಕನಿಷ್ಠ ಮಟ್ಟಕ್ಕಿಳಿದು 4 ವಾರಗಳ ಗಳಿಕೆಯನ್ನು ಕಳೆದುಕೊಂಡಿದೆ. 2.54 ಶೇಕಡಾ 107 ರಿಂಗಿಟ್ಸ್‌ಗಳ ಇಳಿಕೆಯೊಂದಿಗೆ ಪ್ರತೀ ಟನ್‌ಗೆ 4098 ರಿಂಗಿಟ್ಸ್ ($907.04) ಗೆ ಫೆಬ್ರವರಿ 17 ರ ನಂತರದ ಅತೀ ಕನಿಷ್ಠ ದರಕ್ಕಿಳಿದಿದೆಯೆನ್ನಲಾಗಿದೆ. ಮಾರ್ಚ್ 1–10 ತನಕದ ಮಲೇಶಿಯನ್ ಪಾಮೆಣ್ಣೆ ರಫ್ತು 45.3 ರಿಂದ 52.1 ಶೇಕಡಾ ಹೆಚ್ಚಳವಾಗಿದೆಯೆಂದು ಕಾರ್ಗೋಸರ್ವೇಯರ್‌ಗಳು ವರದಿಮಾಡಿದೆ. ಫೆಬ್ರವರಿ ಅಂತ್ಯದ ಮಲೇಶಿಯಾದ ಪಾಮೆಣ್ಣೆ ದಾಸ್ತಾನು 6.6 ಶೇಕಡಾ ಇಳಿಕೆಯೊಂದಿಗೆ 2.12 ಮಿಲಿಯನ್ ಟನ್‌ಗಳಾಗಿವೆಯೆನ್ನಲಾಗಿದೆ. ಹಾಗೂ ಹಿಂದಿನ 6 ತಿಂಗಳುಗಳ ಕನಿಷ್ಠ ಮಟ್ಟವಾಗಿದೆಯೆಂದು ಮಲೇಶಿಯನ್ ಪಾಮೆಣ್ಣೆ ಬೋರ್ಡ್ (MPOB) ದತ್ತಾಂಶಗಳು ಕಾಣಿಸಿವೆಯೆನ್ನಲಾಗಿದೆ.

## ಬೇಡಿಕೆ ಇಳಿಕೆ – ಭಾರತದ ರಫ್ತು ಅಕ್ಕಿ ದರ ಇಳಿಕೆ

ಬೃಹತ್ ವೆಸೆಲ್ಸ್‌ಗಳ ಫ್ರೈಟ್ ದರ ಹೆಚ್ಚಳದಿಂದ ಭಾರತೀಯ ಅಕ್ಕಿಯ ರಫ್ತು ದರ 5% ಸಾರಾಬಾಯಿಲ್ಡ್ ಅಕ್ಕಿ ಟನ್‌ಗೆ $390–395 ರಿಂದ $385–390 ಕ್ಕೆ ಇಳಿಕೆಯಾಗಿದೆಯೆನ್ನಲಾಗಿದೆ. ವಿಯೆಟ್ನಾಂ ಅಕ್ಕಿ ರಫ್ತು ದರ $440–445 ಇದೆ.

## 2022–23 ರ ಜಾಗತಿಕ ಸೋಯಾಬಿನ್ ಅಂತ್ಯದ ದಾಸ್ತಾನು ಇಳಿಕೆ

ಯು.ಎಸ್ ಈ ಸೀಸನ್ ಅಂತ್ಯದ ಸೋಯಾಬೀನ್ ದಾಸ್ತಾನು 15 ಮಿಲಿಯನ್ ಬಶೆಲ್ಸ್‌ಗಳಾಗಬಹುದೆಂದು ಹೇಳಲಾಗಿದೆ. ಅಧಿಕ ರಫ್ತಿನಿಂದ ಅಂತ್ಯದ ದಾಸ್ತಾನು ಇಳಿಕೆಯಾಗುದೆಯೆನ್ನಲಾಗಿದೆ. ರಫ್ತು 25 ಮಿಲಿಯನ್ ಬಶೆಲ್ಸ್ ಹೆಚ್ಚಳದಿಂದ 2.02 ಮಿಲಿಯನ್ ಬಶೆಲ್ಸ್‌ಗಳಾಗಿದೆಯೆನ್ನಲಾಗಿದೆ. ಹಾಗೆಯೇ ಅರೆಯುವಿಕೆ 10 ಮಿಲಿಯನ್ ಬಶೆಲ್ಸ್ ಇಳಿಕೆಯಾಗಿ 2.22 ಮಿಲಿಯನ್ ಬಶೆಲ್ಸ್‌ಗಳಾಗಿದೆ. ಅರ್ಜೆಂಟಿನಾದ ಉತ್ಪಾದ ಇಳಿಕೆಯಿಂದ ಜಾಗತಿಕ ಸೋಯಾಬೀನ್ ಪೂರೈಕೆ ಈ ತಿಂಗಳಲ್ಲಿ ಇಳಿಕೆಯಾಗಬಹುದೆನ್ನಲಾಗಿದೆ. ಅರ್ಜೆಂಟಿನಾದ ಉತ್ಪಾದನೆ 8 ಮಿಲಿಯನ್ ಟನ್ ಇಳಿಕೆಯಾಗಿ 33 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ಜಾಗತಿಕ ಸೋಯಾಬೀನ್ ಬಳಕೆ 5.3 ಮಿಲಿಯನ್ ಟನ್ ಇಳಿಕೆಯಾಗಬಹುದೆನ್ನಲಾಗಿದ್ದು, ಜಾಗತಿಕ ದಾಸ್ತಾನು 100 ಮಿಲಿಯನ್ ಟನ್ ಗಳಾಗಬಹುದೆನ್ನಲಾಗಿದೆ.

## ಅಧಿಕ ಉತ್ಪಾದನೆಯ ಹೊರತಾಗಿಯೂ ಜೀರಿಗೆ ಬೆಳೆಗೆ ಅಕಾಲಿಕ ಮಳೆ ಬಾಧೆ

ಜೀರಿಗೆ ಬೆಳೆ ಅಧಿಕ ಉತ್ಪಾದನೆ ಅಂದಾಜಿನ ಹೊರತಾಗಿಯೂ ಕಟಾನಿನ ಸಮಯದ ಅಕಾಲಿಕ ಮಳೆಯಾದ ಬಾಧಿತವಾಗುಬಹುದೆನ್ನಲಾಗಿದೆ. ಉತ್ಪಾದನೆಯ ಗುಣಮಟ್ಟ ಇತ್ಯಾದಿ ಬಾಧಿತವಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ದೇಶೀ ಹಾಗೂ ರಫ್ತು ಬೇಡಿಕೆ ಉತ್ತಮವಾಗಿದ್ದು, ದರ ಹೆಚ್ಚಳದಲ್ಲದೆ ಮಳೆಯಿಂದ ಬೆಳೆ ಬಾಧಿತವಾದಲ್ಲಿ ಸೀಸನ್ ಅಂತ್ಯದಲ್ಲಿ ದರ ಇನ್ನೂ ಹೆಚ್ಚಳವಾಗಬಹುದೆನ್ನಲಾಗಿದೆ.